ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

DKC-32012/106/2019

ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು, ದಿನಾಂಕ:27.1.2020
ದೂ: 22213530, 22221271

## ಕಚೇರಿ ಆದೇಶ

ವಿಷಯ : ಇಲಾಖೆಯ ಅಧೀನದಲ್ಲಿರುವ ವಿವಿಧ ಅಕಾಡೆಮಿಗಳ ಕಾರ್ಯಚಟುವಟಿಕೆಗಳಿಗಾಗಿ 2019-20ನೇ ಸಾಲಿನ ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಆದೇಶ ಸಂಖ್ಯೆ:ಕಸಂವಾ/03/ಕಸಧ/2019, ಬೆಂಗಳೂರು. ದಿನಾಂಕ:22.1.2020.

2. ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ/112/ಕಸನಿ/2009, ಬೆಂಗಳೂರು. ದಿ:23.01.2012.

*****

**ಪ್ರಸ್ತಾವನೆ:**

ಇಲಾಖೆಯ ಅಧೀನದಲ್ಲಿರುವ ವಿವಿಧ ಅಕಾಡೆಮಿಗಳ 2019-20ನೇ ಸಾಲಿನ ಕಾರ್ಯಚಟುವಟಿಕೆಗೆ ಹಾಗೂ ವೇತನ ವೆಚ್ಚಗಳಿಗೆ ಕ್ರಿಯಾ ಯೋಜನೆಯಲ್ಲಿ 13 ವಿವಿಧ ಅಕಾಡೆಮಿಗಳಿಗೆ ಲೆಕ್ಕಶೀರ್ಷಿಕೆ:2205-00-102-4-13-103ರಡಿ ರೂ.800.00ಲಕ್ಷಗಳನ್ನು ಅವಕಾಶ ಮಾಡಿಕೊಳ್ಳಲಾಗಿದೆ. ಈ ಮೊತ್ತದಲ್ಲಿ ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ನಾಲ್ಕನೇ ಕಂತಿನ ಅನುದಾನವಾಗಿ **ರೂ.200.00ಲಕ್ಷ**ಗಳನ್ನು ಮಂಜೂರು ಮಾಡಿದ್ದು, 13 ವಿವಿಧ ಅಕಾಡೆಮಿಗಳಿಗೆ ಬಿಡುಗಡೆ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ:**

ಇಲಾಖೆಯ ಅಧೀನದಲ್ಲಿರುವ ವಿವಿಧ ಅಕಾಡೆಮಿಗಳ 2019-20ನೇ ಸಾಲಿನ ಕಾರ್ಯಚಟುವಟಿಕೆಗೆ ಹಾಗೂ ವೇತನ ವೆಚ್ಚಗಳಿಗೆ ನಾಲ್ಕನೇ ಕಂತಿನ ಅನುದಾನವಾಗಿ ಒಟ್ಟಾರೆ ವಿವಿಧ 13 ಅಕಾಡೆಮಿಗಳಿಗೆ **ರೂ.200.00ಲಕ್ಷ** (ರೂಪಾಯಿ ಎರಡು ನೂರು ಲಕ್ಷ ಮಾತ್ರ)ಗಳನ್ನು ರಿಜಿಸ್ಟ್ರಾರ್‌ಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಿದೆ. ಸದರಿ ಅನುದಾನವನ್ನು ಖಜಾನೆ-2 (ಕೆ-2)ನಲ್ಲಿ ಅನುದಾನದ ಬಿಲ್ಲಿನ ಮೇಲೆ ಡ್ರಾ ಮಾಡಿ ಪಾವತಿಸಲು ಆದೇಶಿಸಿದೆ. ವಿವರ ಈ ಕೆಳಗಿನಂತಿದೆ.

**ಷರತ್ತುಗಳು:**

1. ಅಕಾಡೆಮಿಗಳು 2019-20ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ನಿಗದಿ ಮಾಡಿಕೊಂಡಿರುವ ಆಯಾ ಕಾರ್ಯಕ್ರಮಗಳಿಗೆ ಮಾತ್ರ ಅನುದಾನ ವೆಚ್ಚ ಮಾಡತಕ್ಕದ್ದು. ಬೇರೆ ಯಾವುದೇ ಉದ್ದೇಶಕ್ಕೆ ವೆಚ್ಚ ಮಾಡತಕ್ಕದ್ದಲ್ಲ.
2. ಮಂಜೂರು ಮಾಡಿದ ಹಣಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ನಿಯಮ 2000 ಮತ್ತು ಸರ್ಕಾರ ಆಗಿಂದಾಗ್ಗೆ ಹೊರಡಿಸಿದ ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

| ಕ್ರ.ಸಂ. | ಅಕಾಡೆಮಿಗಳ ಹೆಸರು | ಬಿಡುಗಡೆ ಮಾಡಲಾದ ನಾಲ್ಕನೇ ಕಂತಿನ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು **(Recipient ID - 1000193014)** | 20.00 |
| 2. | ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು **(Recipient ID - 1000193024)** | 20.00 |
| 3. | ರಿಜಿಸ್ಟ್ರಾರ್, ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿ, ಬೆಂಗಳೂರು **(Recipient ID - 1000193026)** | 20.00 |
| 4. | ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು **(Recipient ID - 1000193020)** | 20.00 |

2.....

| | | |
|---|---|---|
| 5. | ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು **(Recipient ID - 1000193025)** | 20.00 |
| 6. | ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು **(Recipient ID - 1000193018)** | 20.00 |
| 7. | ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು **(Recipient ID - 1000193021)** | 20.00 |
| 8. | ರಿಜಿಸ್ಟ್ರಾರ್, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು **(Recipient ID - 1000193008)** | 10.00 |
| 9. | ರಿಜಿಸ್ಟ್ರಾರ್, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು **(Recipient ID - 1000193022)** | 10.00 |
| 10. | ರಿಜಿಸ್ಟ್ರಾರ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ **(Recipient ID - 1000193015)** | 10.00 |
| 11. | ರಿಜಿಸ್ಟ್ರಾರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ-ಸಾಹಿತ್ಯ ಅಕಾಡೆಮಿ, ಮಡಿಕೇರಿ **(Recipient ID - 1000185221)** | 10.00 |
| 12. | ರಿಜಿಸ್ಟ್ರಾರ್, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು **(Recipient ID - 1000185303)** | 10.00 |
| 13. | ರಿಜಿಸ್ಟ್ರಾರ್, ಕರ್ನಾಟಕ ಬಯಲಾಟ ಅಕಾಡೆಮಿ, ಬಾಗಲಕೋಟೆ **(Recipient ID – 1701789134)** | 10.00 |
| | **(ರೂಪಾಯಿ ಎರಡು ನೂರು ಲಕ್ಷ ಮಾತ್ರ)** | **ರೂ.200.00ಲಕ್ಷ** |

ಈ ವೆಚ್ಚವನ್ನು 2019-20ನೇ ಸಾಲಿನ ಲೆಕ್ಕ ಶೀರ್ಷಿಕೆ 2205-00-102-4-13-103ರಡಿ ಭರಿಸತಕ್ಕದ್ದು. ಈ ಆದೇಶವನ್ನು ಉಲ್ಲೇಖಿತ (2)ರ ಸರ್ಕಾರಿ ಆದೇಶದಲ್ಲಿ ಮಾನ್ಯ ಇಲಾಖಾ ನಿರ್ದೇಶಕರಿಗೆ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕಡತವು ನಿರ್ದೇಶಕರಿಂದ ಅನುಮೋದನೆಗೊಂಡಿದೆ.

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು.

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಉಪ / ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ರಿಜಿಸ್ಟ್ರಾರ್ ಕರ್ನಾಟಕ ಸಾಹಿತ್ಯ, ನಾಟಕ, ಸಂಗೀತ-ನೃತ್ಯ, ಜಾನಪದ, ಲಲಿತಕಲಾ, ಶಿಲ್ಪಕಲಾ, ಯಕ್ಷಗಾನ, ತುಳು, ಬ್ಯಾರಿ, ಕೊಂಕಣಿ, ಅರೆ ಭಾಷೆ, ಕೊಡವ, ಬಯಲಾಟ ಅಕಾಡೆಮಿ ಇವರುಗಳಿಗೆ ಮುಂದಿನ ಕ್ರಮಕ್ಕಾಗಿ.
4. ಜಂಟಿ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಾ), (ಆ), (ಸು.ಕ) ಮತ್ತು (ಕಾ) ಮಾಹಿತಿಗಾಗಿ.
5. ಲೆಕ್ಕಪತ್ರ ಅಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.
6. ಅಧೀಕ್ಷಕರು, ಲೆಕ್ಕಪತ್ರ ಶಾಖೆ, ಕೇಂದ್ರ ಕಚೇರಿ, ಬೆಂಗಳೂರು ಇವರಿಗೆ ಟಿ.ಎನ್.ಎಂ.ಸಿ.ಗೆ ಹಣ ಅಪ್‌ಲೋಡ್ ಮಾಡಲು ಮತ್ತು ಹಂಚಿಕೆ ನಮೂದಿಸಿ, ಬಿಲ್ಲು ತಯಾರಿಸಲು ಆದೇಶಿಸಿದೆ.
7. ಕಡತಕ್ಕೆ.

4ನೇ ಕಂತು